INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -4, July-August, 2025
PageNo,-80-91
Peer -Reviewed, Refereed Journal

# ಹಾಸನ ಜಿಲ್ಲೆಯ ನೀರಾವರಿ ಬೆಳವಣಿಗೆ ಮತ್ತು ಜಲಾಶಯಗಳ ಒಂದು ಅವಲೋಕನ

**ಪುರುಷೋತ್ತಮ ಹೆಚ್.ವಿ.**[1]

**ಸಾರಾಂಶ:** ನೀರು ಮಾನವ ಸಂಕುಲಕ್ಕೆ ಪ್ರಕೃತಿ ನೀಡಿರುವ ಒಂದು ಅತ್ಯಮೂಲ್ಯ ವಸ್ತುವಾಗಿದ್ದು, ಯುನೆಸ್ಕೋ ವರದಿಯಂತೆ ಭೂಮಿಯ ಒಟ್ಟು ಜಲಸಂಪತ್ತು 1.4 ಬಿಲಿಯನ್ ಘನ ಕಿ.ಮೀ, ಆಗಿದ್ದು ಇದರಲ್ಲಿ ಸಿಹಿ ನೀರಿನ ಪ್ರಮಾಣವು ಕೇವಲ 35 ದಶ ಲಕ್ಷ ಕಿಲೋ ಮೀಟರುಗಳಾಗಿದ್ದು, ಒಟ್ಟು ಜಲಸಂಪತ್ತಿನಲ್ಲಿ ಶೇ.2.5 ಮಾತ್ರ ಸಿಹಿ ನೀರನ್ನು ಹೊಂದಿದೆ. ಇದರಲ್ಲಿ ಶೇ. 70 ಭಾಗ ಮಂಜುಗಡ್ಡೆ ರೂಪದಲ್ಲಿದ್ದು, ಉಳಿದ ಶೇ.30 ಭಾಗ ಅಂತರ್ಜಲವಾಗರುತ್ತದೆ. ಭಾರತದ ಜಲಸಂಪತ್ತು 1897 ಘನ ಮೀಟರ್‌ಗಳಾಗಿದ್ದು ಪ್ರಪಂಚದ ಒಟ್ಟು ಜಲಸಂಪತ್ತಿನಲ್ಲಿ ಶೇ.4 ರಷ್ಟನ್ನು ಹೊಂದಿದೆ. ಆಧುನಿಕ ಕಾಲದಲ್ಲಿ ಗೃಹ ಬಳಕೆಗೆ 8%, ಕೈಗಾರಿಕೆಗಳಿಗೆ 22% , ಕೃಷಿಗೆ 70% ನೀರು ಬಳಕೆಯಾಗುತ್ತಿದೆ. ಭಾರತದ ಮಳೆಯು ಮಾನ್ಸೂನ್‌ನ್ನು ಅವಲಂಬಿಸಿ, ಕೆಲವೊಮ್ಮೆ ವಿಪರೀತ ಮಳೆಯಿಂದಾಗಿ ಅತಿವೃಷ್ಟಿಯನ್ನು, ಕೆಲವೊಮ್ಮೆ ಅತಿ ಕಡಿಮೆ ಮಳೆಯಿಂದಾಗಿ ಅನಾವೃಷ್ಟಿಯನ್ನು ಕಾಣಬಹುದು. ಆದುದರಿಂದ ಭಾರತದ ವ್ಯವಸಾಯವನ್ನು ಮಾನ್ಸೂನ್ ಜೊತೆ ಆಡುವ ಜೂಜಾಟವಿದ್ದಂತೆ ಎಂದು ಹೇಳಲಾಗುತ್ತದೆ. ಆದುದರಿಂದ ಭಾರತವು ತನ್ನದೇ ಆದ ಜಲನೀತಿಯನ್ನು ರೂಪಿಸಿಕೊಂಡು ಮಳೆಗಾಲದಲ್ಲಿ ಬಿದ್ದಂತಹ ನೀರನ್ನು ಪೋಲಾಗದಂತೆ ತಡೆಗಟ್ಟಿ ಪ್ರತಿ ಹನಿಯೂ ಕೂಡ ಸದ್ಬಳಕೆ ಆಗುವಂತೆ ಯೋಜನೆಗಳನ್ನು ರೂಪಿಸಿದೆ. **"ವಾಟರ್ ಈಸ್ ಪ್ರೈಮ್ ನ್ಯಾಚುರಲ್ ರೀಸೋರ್ಸ್ ಎ ಬೇಸಿಕ್ ಹ್ಯೂಮನ್ ನೀಡ್ ಅಂಡ್ ಎ ಪ್ರೀಷಿಯಸ್ ನ್ಯಾಷನಲ್ ಅಸೆಟ್"** ಎಂಬ ಧ್ಯೇಯ ವಾಕ್ಯವನ್ನು ಭಾರತದ ಜಲನೀತಿಯು ಹೊಂದಿದೆ. ಭಾರತದ ನೀರಾವರಿ ಯೋಜನೆಗಳು ವಿವಿಧೋದ್ದೇಶ ಯೋಜನೆಗಳಾಗಿದ್ದು, ಇವುಗಳು ಕೇವಲ ಕೃಷಿ ಮತ್ತು ಕುಡಿಯುವ ನೀರಿಗೆ ಮಾತ್ರವಲ್ಲದೆ ಪ್ರವಾಹ ತಡೆಗಟ್ಟುವುದು, ಬರಗಾಲವನ್ನು ನಿಭಾಯಿಸುವುದು, ಗೃಹ ಮತ್ತು ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು, ಮತ್ಸ್ಯೋದ್ಯಮ, ಮತ್ತು ಜಲವಿದ್ಯುತ್ ಉತ್ಪಾದನೆ

[1].ಸಂಶೋಧಕರು. ಇತಿಹಾಸ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.

ಮನೋರಂಜನೆಗಾಗಿ, ಒಟ್ಟಾರೆ ದೇಶದ ಅಭಿವೃದ್ಧಿಯನ್ನು ಪ್ರತಿಬಿಂಬಿಸುತ್ತದೆ ಈ ವಿಧಾನವನ್ನು ನೀರಾವರಿ ಅಭಿವೃದ್ಧಿ ಎಂದು ಕರೆಯಲಾಗುತ್ತದೆ.

**ಪ್ರಮುಖ ಪದಗಳು : ಮಳೆಯ ಪ್ರಮಾಣ, ನೀರಾವರಿ ವಿಧಗಳು, ನದಿಗಳು, ಜಲಾಶಯಗಳು, ಕಾಲುವೆಗಳು.**

**ಪೀಠಿಕೆ:–**

ಹಾಸನ ಜಿಲ್ಲೆಯು ಕರ್ನಾಟಕದ ಒಂದು ಪ್ರಮುಖ ಜಿಲ್ಲೆಯಾಗಿದ್ದು, ಸಾಮಾಜಿಕವಾಗಿ, ರಾಜಕೀಯವಾಗಿ, ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ, ತನ್ನದೇ ಆದ ಒಂದು ಸ್ಥಾನಮಾನವನ್ನು ಹೊಂದಿದೆ. ಹಾಸನ ಜಿಲ್ಲೆಯನ್ನು ಹಲವಾರು ರಾಜಮನೆತನಗಳು ಆಳ್ವಿಕೆ ನೆಡೆಸಿದ್ದು, ಪ್ರಮುಖವಾಗಿ ಮೌರ್ಯರು, ಶಾತವಾಹನರು, ಕದಂಬರು, ಚಾಲುಕ್ಯರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಸಂಸ್ಥಾನದ ರಾಜರ ಆಳ್ವಿಕೆಗೆ ಒಳಪಟ್ಟಿತ್ತು. ಹಾಸನ ಜಿಲ್ಲೆಯು ವಿವಿಧ ಜನಾಂಗ, ಧರ್ಮಗಳ, ಸಂಸ್ಕೃತಿಗಳ, ಆಚಾರ ವಿಚಾರಗಳ ಬೀಡಾಗಿದ್ದು, ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣಬಹುದಾಗಿದೆ. ಸಾಂಸ್ಕೃತಿಕವಾಗಿ ಹಾಸನ ಜಿಲ್ಲೆಯು ಶ್ರೀಮಂತವಾಗಿದ್ದು, ಭಾರತದ ಸಾಹಿತ್ಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಬೇಲೂರು ಹಳೇಬೀಡು, ಶ್ರವಣಬೆಳಗೊಳ ಮೊದಲಾದ ದೇವಾಲಯಗಳು ಹಾಸನ ಜಿಲ್ಲೆಗೆ ವಿಶ್ವಮಾನ್ಯತೆಯನ್ನು ತಂದುಕೊಟ್ಟಿವೆ.

ಸ್ಥಳ ಪುರಾಣದ ಪ್ರಕಾರ ಹಾಸನದ ಮೂಲ ಹೆಸರು ಸಿಂಹಾಸನಪುರವಾಗಿತ್ತು. ಆದರೆ ಹಾಸನಾಂಭ ದೇವಿಯು ಹಾಸನದಲ್ಲಿ ನೆಲೆಸಿದ್ದರಿಂದ ಇದನ್ನು ಹಾಸನ ಎಂಬುದಾಗಿ ಕರೆಯಲಾಗಿದೆ ಎಂಬ ಪ್ರತೀತಿ ಇದೆ. ಹೊಯ್ಸಳರ ಕಾಲದ 12 ನೇ ಶತಮಾನದ ಕುದುರೆಗುಂಡಿ ಗ್ರಾಮದಲ್ಲಿ ದೊರೆತಿರುವ ವೀರಗಲ್ಲು ಶಾಸನದಲ್ಲಿ ಹಾಸನ ಎಂಬ ಪದದ ಉಲ್ಲೇಖವಿದೆ. ಹಾಸನವು ಕರ್ನಾಟಕ ರಾಜ್ಯದ ನೈರುತ್ಯ ಭಾಗದಲ್ಲಿದ್ದು, ಉತ್ತರ ಅಕ್ಷಾಂಶವು 12,31 ರಿಂದ 12.33 ರವರಿಗೆ ಮತ್ತು ಪೂರ್ವ ರೇಖಾಂಶವು 75.33 ರಿಂದ 76.38 ರವರಗೆ ಒಳಗೊಂಡಿದೆ. ಹಾಸನ ಜಿಲ್ಲೆಯ ವಿಸ್ತೀರ್ಣವು ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ.3.6 ಹೊಂದಿದ್ದು, ವಿಸ್ತೀರ್ಣದಲ್ಲಿ 8 ನೇ ಸ್ಥಾನವನ್ನು ಪಡೆದುಕೊಂಡಿದೆ. ಹಾಸನ ಜಿಲ್ಲೆಯಲ್ಲಿ ಒಟ್ಟು 8 ತಾಲ್ಲೂಕುಗಳಿದ್ದು, ಅವುಗಳೆಂದರೆ ಹಾಸನ, ಅರಕಲಗೂಡು, ಆಲೂರು. ಅರಸೀಕೆರೆ, ಬೇಲೂರು, ಸಕಲೇಶಪುರ, ಹೊಳೆನರಸೀಪುರ. ಚನ್ನರಾಯಪಟ್ಟಣ. ಹಾಸನ ಜಿಲ್ಲೆಯು ನೈಸರ್ಗಿಕವಾಗಿ ಸಂಪನ್ಮೂಲ ಜಿಲ್ಲೆಯಾಗಿದೆ.

**ಸಾಹಿತ್ಯ ಪರಾಮರ್ಶನ**

- ರಾಮಕೃಷ್ಣ ಕೆ.ಎಸ್ (2005), ಇರಿಗೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಎ ಸ್ಟಡಿ ಆಫ್ ಕೃಷ್ಣರಾಜಸಾಗರ ಪ್ರಾಜೆಕ್ಟ್, ಈ ಪ್ರಬಂಧದಲ್ಲಿ ಕೃಷ್ಣರಾಜಸಾಗರ ನೀರಾವರಿ ಅಭಿವೃದ್ಧಿ ಯೋಜನೆಗಳು, ಈ ಯೋಜನೆಯಿಂದ ಗ್ರಾಮೀಣ ಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ

ಸುಧಾರಣೆಗಳ ಅಧ್ಯಯನವನ್ನು ಮಾಡಿರುತ್ತಾರೆ. ನೀರಾವರಿಯ ಮಹತ್ವ, ಬೃಹತ್ ಕರ್ನಾಟಕದ ನೀರಾವರಿ ಯೋಜನೆಗಳು ಮತ್ತು ಅವುಗಳಿಂದಾಗುವ ಸಮಸ್ಯೆಗಳು, ನೀರಾವರಿ ಅಭಿವೃದ್ಧಿಯ ಮೂಲಕ ಗ್ರಾಮೀಣ ಜನರ ಬೀರಿದ ಪರಿಣಾಮಗಳನ್ನು ಅಧ್ಯಯನ ಮಾಡಿರುತ್ತಾರೆ.

- ಕೃಷ್ಣ ಕೊಲ್ಹಾರ ಕುಲಕರ್ಣಿ,**ಕರ್ನಾಟಕದಲ್ಲಿ ನದಿಗಳು ಮತ್ತು ನೀರಾವರಿ.**ಈ ಲೇಖನವನ್ನು ಇವರು ರಚಿಸಿದ್ದಾರೆ. ಈ ಲೇಖನವನ್ನು ಕೆ.ಅನಂತರಾಮರಾವ್ ರವರು ತಮ್ಮ ಸುವರ್ಣ ಕರ್ನಾಟಕ ದರ್ಶನ ಕೃತಿಯಲ್ಲಿ ಸಂಪಾದಿಸಿದ್ದಾರೆ. ದೇಶದ ಅಭಿವೃದ್ದಿಯಲ್ಲಿ ಕೃಷಿಯ ಅಭಿವೃದ್ದಿ ಪ್ರಾಮುಖ್ಯತೆ, ಕೃಷಿ ಅಭಿವೃದ್ಧಿಯಲ್ಲಿ ನದಿಗಳು, ನೀರಾವರಿ ವ್ಯವಸ್ಥೆ ಪಾತ್ರಗಳನ್ನು ಕುರಿತು ಅಧ್ಯಯನವನ್ನು ಮಾಡಿರುತ್ತಾರೆ. ಈ ಕೃತಿಯಲ್ಲಿ ಕರ್ನಾಟಕದಲ್ಲಿರುವ ನದಿಗಳು, ಜಲಾನಯನ ಪ್ರದೇಶಗಳು, ಜಲಾಶಯ ಯೋಜನೆಗಳು, ಅವುಗಳಿಂದಾಗುವ ಪರಿಣಾಮಗಳು,ಕೃಷಿ, ವಿದ್ಯುತ್ ಉತ್ಪಾದನೆಯಲ್ಲಿ ಅವುಗಳ ಬಳಕೆಯ ಬಗೆಗೆ ಮಾಹಿತಿಯನ್ನು ತಿಳಿಯಬಹುದಾಗಿದೆ. ನದಿನೀರಿನ ಹಂಚಿಕೆ, ಅದರ ಸಮಸ್ಯೆಗಳು ವಿವಿಧ ಜಿಲ್ಲೆಗಳು ಪಡೆದುಕೊಳ್ಳುತ್ತಿರುವ ಪ್ರಯೋಜನಗಳ ಕುರಿತು ತಿಳಿಯಬಹುದಾಗಿದೆ.

**ಅಧ್ಯಯನದ ಉದ್ದೇಶಗಳು**

- ಹಾಸನ ಜಿಲ್ಲೆಯ ತಾಲ್ಲೂಕುವಾರು ಮಳೆ ಪ್ರಮಾಣಗಳ ವಿಶ್ಲೇಷಣೆ
- ಹಾಸನ ಜಿಲ್ಲೆಯಲ್ಲಿರುವ ನೀರಾವರಿ ವಿಧಗಳಾದ ಕೆರೆ, ಬಾವಿ, ಕಾಲುವೆ ನೀರಾವರಿಗಳ ವಿಶ್ಲೇಷಣೆ
- ಹಾಸನ ಜಿಲ್ಲೆಯಲ್ಲಿರುವ ನೀರಾವರಿ ಜಲಾಶಯ ಯೋಜನೆಗಳ ವಿಶ್ಲೇಷಣೆ
- ನೀರಾವರಿ ಉದ್ದೇಶಕ್ಕಾಗಿ ನಿರ್ಮಿಸಿರುವ ಕಾಲುವೆಗಳ ವಿಶ್ಲೇಷಣೆ
- ನೀರಾವರಿ ಯೋಜನೆಗ಼ಳಿಂದ ಹಾಸನ ಜಿಲ್ಲೆಯಲ್ಲಿ ಆಗಿರುವ ಅಭಿವೃದ್ದಿ ವಿಶ್ಲೇಷಣೆ

**ಪ್ರಾಕ್‌ಕಲ್ಪನೆ**

ಹಾಸನ ಜಿಲ್ಲೆಯ ನೀರಾವರಿ ಯೋಜನೆಗ಼ಳು ಗ್ರಾಮೀಣ ಜನರ ಆರ್ಥಿಕ ಮಟ್ಟವನ್ನು ಸುಧಾರಿಸಿವೆ.

- ಹಾಸನ ಜಿಲ್ಲೆಯ ನೀರಾವರಿ ಯೋಜನೆಗಳು ನೆರೆಹೊರೆಯ ಜಿಲ್ಲೆಗಳಾದ ತುಮಕೂರು, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಜನರ ಜೀವನ ಮಟ್ಟವನ್ನು ಸುಧಾರಿಸಿವೆ.

**ಅಧ್ಯಯನದ ವ್ಯಾಪ್ತಿ**

ಸದರಿ ವಿಷಯದ ಅಧ್ಯಯನ ವ್ಯಾಪ್ತಿಯು ಹಾಸನ ಜಿಲ್ಲೆಯ 8 ತಾಲ್ಲೂಕುಗಳನ್ನು ಹಾಗೂ ನೀರಾವರಿ ಜಲಾಶಯ ಯೋಜನೆಗಳಾದ ಹೇಮಾವತಿ, ವಾಟೆಹೊಳೆ ಜಲಾಶಯದ ಅಣೆಕಟ್ಟುಗಳ ಪ್ರದೇಶಗಳು ಮತ್ತು ಕಾಲುವೆಗಳ ವ್ಯಾಪ್ತಿಯನ್ನು ಹೊಂದಿದೆ.

**ಸಂಶೋಧನ ವಿಧಾನ**

ಸದರಿ ವಿಷಯದ ಅಧ್ಯಯನಕ್ಕಾಗಿ ಸಾಮಾಜಿಕ ಸಂಶೋಧನ ವಿಧಾನಗಳಾದ ಪ್ರಾಥಮಿಕ ಮತ್ತು ಮಾಧ್ಯಮಿಕ ವಿಧಾನಗಳನ್ನು ಉಪಯೋಗಿಸಿಕೊಂಡು ದತ್ತಾಂಶಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಪ್ರಾಥಮಿಕ ಸಂಶೋಧನ ವಿಧಾನಗಳಾದ ಪ್ರಶ್ನಾವಳಿ, ಸಹಭಾಗಿ ಅವಲೋಕನ, ಮಾಧ್ಯಮಿಕ ಸಂಶೋಧನ ವಿಧಾನದಲ್ಲಿ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ವಿಷಯಕ್ಕೆ ಸಂಬಂದಿಸಿದಂತೆ ಪ್ರಕಟಿತವಾಗಿರುವ ಮಹಾಪ್ರಬಂಧಗಳು,ಲೇಖನಗಳು, ವೃತ್ತ ಪತ್ರಿಕೆಗಳ, ಪುಸ್ತಕಗಳು ಮೊದಲಾದವುಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಮಾದರಿ ಗಾತ್ರ :**

**ಕೊಷ್ಟಕ 1,__ಹಾಸನ ಜಿಲ್ಲೆಯ ತಾಲ್ಲೂಕುವಾರು 2013 ರಿಂದ 2023 ರವರೆಗೆ ಸರಾಸರಿ ಮಳೆಯ ಪ್ರಮಾಣದ ಅಧ್ಯಯನವನ್ನು ತೋರಿಸುವ ಕೋಷ್ಠಕ,**

| ಕ್ರ.ಸಂ | ತಾಲ್ಲೂಕುಗಳು | 2013 | 2014 | 2015 | 2016 | 2017 | 2018 | 2019 | 2020 | 2021 | 2022 | ಸರಾಸರಿ (ಸೆಂ.ಮೀ) |
|---|---|---|---|---|---|---|---|---|---|---|---|---|
| 1 | ಆಲೂರು | 1271 | 1286 | 1134 | 876 | 970 | 1778 | 1587 | 1149 | 1258 | 1482 | 1279.1 |
| 2 | ಅರಕಲಗೂಡು | 941 | 873 | 824 | 519 | 838 | 1248 | 918 | 792 | 1100 | 1366 | 941.9 |
| 3 | ಅರಸೀಕೆರೆ | 558 | 824 | 869 | 325 | 736 | 664 | 944 | 749 | 1035 | 982 | 768.6 |
| 4 | ಬೇಲೂರು | 1149 | 1315 | 1221 | 700 | 906 | 1283 | 1571 | 1160 | 1163 | 1532 | 1200 |
| 5 | ಚನ್ನರಾಯಪಟ್ಟಣ | 569 | 764 | 737 | 359 | 799 | 590 | 910 | 800 | 1130 | 1342 | 800 |
| 6 | ಹಾಸನ | 865 | 1038 | 822 | 448 | 814 | 978 | 1122 | 824 | 1027 | 1288 | 922.6 |
| 7 | ಹೊಳೆನರಸೀಪುರ | 778 | 827 | 695 | 442 | 718 | 876 | 862 | 653 | 947 | 1398 | 819.6 |
| 8 | ಸಕಲೇಶಪುರ | 2938 | 2667 | 2105 | 1841 | 2020 | 3702 | 3581 | 2902 | 2946 | 3521 | 2822.3 |
| | | 1499 | 1500 | 1271 | 920 | 1192 | 1858 | 1469 | 1161 | 1326 | 1701 | 1389.7 |

**ಮೂಲಗಳು : ಹಾಸನ ಜಿಲ್ಲೆಯ ಅಂಕಿಅಂಶಗಳ ನೋಟ 2022–23 ಪುಟ ಸಂಖ್ಯೆ 75 ಮತ್ತು 76**

2013 ರಿಂದ 2022 ರವರೆಗೆ ಹಾಸನ ಜಿಲ್ಲೆಯು ಪಡೆದಿರುವ ತಾಲ್ಲೂಕುವಾರು ಮಳೆಯ ಪ್ರಮಾಣವನ್ನು ಕೋಷ್ಟಕ–1 ರಲ್ಲಿ ವಿವರಿಸಲಾಗಿದೆ. ಹಾಸನ ಜಿಲ್ಲೆಯಲ್ಲಿ ಪಶ್ಚಿಮ ಘಟ್ಟಗಳು ಹಾದು ಹೋಗಿರುವುದರಿಂದ ಸಕಲೇಶಪುರ ಮಲೆನಾಡು ಪ್ರದೇಶವಾಗಿದ್ದು, ಬೇಲೂರು, ಆಲೂರು, ಹಾಸನ, ಅರಕಲಗೂಡು ಅರಮಲೆನಾಡು ಪ್ರದೇಶಗಳಾಗಿದ್ದು ಅತಿ ಹೆಚ್ಚು ನೈರುತ್ಯ ಮಳೆ ಪಡೆಯುವ ತಾಲ್ಲೂಕುಗಳು, ಉಳಿದ ಹೊಳೇನರಸೀಪುರ, ಚೆನ್ನರಾಯಟ್ಟಣ ಅರಸೀಕೆರೆ ಬಯಲು ಪ್ರದೇಶಗಳಾಗಿದ್ದು ಅತಿ ಕಡಿಮೆ ಮಳೆ ಪಡೆಯುವ ಪ್ರದೇಶಗಳಾಗಿವೆ ಹಾಸನ ಜಿಲ್ಲೆಯ 8 ತಾಲ್ಲೂಕುಗಳಲ್ಲಿ 2013 ರಿಂದ 2022 ರವರೆಗೆ ಬಿದ್ದಿರುವ ಮಳೆಯ ಪ್ರಮಾಣವನ್ನು ವಿವರಿಸಲಾಗಿದೆ. ಈ 10 ವರ್ಷಗಳ ಅವಧಿಯಲ್ಲಿ 2022 ರಲ್ಲಿ ಅತಿ ಹೆಚ್ಚು ಮಳೆಯನ್ನು ಪಡೆದಿದ್ದರೆ 2016 ರಲ್ಲಿ ಅತಿ ಕಡಿಮೆಯನ್ನು ಪಡೆಯಲಾಗಿದೆ. 10

ವರ್ಷಗಳ ಸರಾಸರಿ ಮಳೆಯಲ್ಲಿ ಸಕಲೇಶಪುರ ತಾಲ್ಲೂಕು 2822.3 ಸೆಂ ಮೀ ಮಳೆಯನ್ನು ಪಡೆದು ಹಾಸನ ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆ ಪಡೆಯುವ ತಾಲ್ಲೂಕು ಆಗಿದೆ. ನಂತರದ ಸ್ಥಾನವನ್ನು ಕ್ರಮವಾಗಿ ಆಲೂರು, ಬೇಲೂರು, ಅರಕಲಗೂಡು, ಹಾಸನ, ಹೊಳೇನರಸೀಪುರ, ಚೆನ್ನರಾಯಪಟ್ಟಣ, ಅರಸೀಕೆರೆ ಇಳಿಕೆ ಪ್ರಮಾಣದಲ್ಲಿ ಮಳೆ ಪಡೆದಿರುವುದನ್ನು ಗಮನಿಸಬಹುದಾಗಿದೆ. ಇಳಿಕೆವಾರು ಮಳೆ ಪಡೆದಿರುವುದನ್ನು ಗಮನಿಸಬಹುದಾಗಿದೆ. ಈ ಕೋಷ್ಟಕದಿಂದ ತಾಲ್ಲೂಕುವಾರು ಮಳೆ ಪ್ರಮಾಣದಲ್ಲಿ ಅಸಮಾನ ಹಂಚಿಕೆಯನ್ನು ಗಮನಿಸಬಹುದು.

**ಕೊಷ್ಠಕ 2,ಹಾಸನ ಜಿಲ್ಲೆಯ ನೀರಾವರಿ ವಿಧಗಳ ಅಧ್ಯಯನವನ್ನು ತೋರಿಸುವ ಕೋಷ್ಠಕ**

| ಕ್ರ.ಸಂ | ತಾಲ್ಲೂಕುಗಳು | ಕರೆ | | ಕಾಲುವೆ | | ಕೊಳವೆ ಬಾವಿ | | ತೆರೆದ ಬಾವಿ | |
|---|---|---|---|---|---|---|---|---|---|
| | | ಸಂಖ್ಯೆ | ವಿಸ್ತೀರ್ಣ (ಹೆಕ್ಟೇರ್) | ಉದ್ದ (ಕಿ.ಮೀ) | ವಿಸ್ತೀರ್ಣ (ಹೆಕ್ಟೇರ್) | ಸಂಖ್ಯೆ | ವಿಸ್ತೀರ್ಣ (ಹೆಕ್ಟೇರ್) | ಸಂಖ್ಯೆ | ವಿಸ್ತೀರ್ಣ (ಹೆಕ್ಟೇರ್) |
| 1 | ಆಲೂರು | 920 | 4400 | 40 | 2110 | 1107 | 1399 | 39 | 14 |
| 2 | ಅರಕಲಗೂಡು | 804 | 6750 | 96 | 9513 | 3851 | 6210 | 265 | 130 |
| 3 | ಅರಸೀಕೆರೆ | 249 | 0 | 0 | 0 | 14508 | 27442 | 41 | 0 |
| 4 | ಬೇಲೂರು | 1624 | 4135 | 96 | 4465 | 3560 | 4180 | 116 | 27 |
| 5 | ಚನ್ನರಾಯಪಟ್ಟಣ | 242 | 3360 | 42 | 25980 | 13824 | 6651 | 19 | 0 |
| 6 | ಹಾಸನ | 1063 | 4885 | 41 | 6315 | 7387 | 14877 | 57 | 0 |
| 7 | ಹೊಳೆನರಸೀಪುರ | 333 | 803 | 205 | 6056 | 2613 | 1271 | 5 | 0 |
| 8 | ಸಕಲೇಶಪುರ | 831 | 4080 | 0 | 0 | 216 | 354 | 410 | 81 |
| | | 6066 | 28413 | 520 | 54439 | 47066 | 62384 | 952 | 252 |

**ಮೂಲಗಳು : ಹಾಸನ ಜಿಲ್ಲೆಯ ಅಂಕಿಅಂಶಗಳ ನೋಟ 2022–23 ಪುಟ ಸಂಖ್ಯೆ 75 ಮತ್ತು 76**

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಹಾಸನ ಜಿಲ್ಲೆಯ ನೀರಾವರಿ ವಿಧಗಳಲ್ಲಿ ಪ್ರಮುಖವಾಗಿ ಕೆರೆ, ಕಾಲುವೆ, ಬಾವಿ ನೀರಾವರಿಗಳನ್ನು ಕಾಣಬಹುದು. ಕೃಷಿ ಬೆಳೆಗಳಿಗೆ ಮಳೆಯ ನೀರನ್ನು ಸಂಗ್ರಹಿಸಿ ಈ ಮೇಲ್ಕಂಡ 3 ವಿಧಗಳ ಮುಖಾಂತರ ಕೃತಕವಾಗಿ ನೀರನ್ನು ಒದಗಿಸುತ್ತಿರುವುದನ್ನು ಪ್ರಾಚೀನ ಕಾಲದಿಂದಲೂ ತಿಳಿಯಬಹುದು. ಹಲವಾರು ರಾಜರು ಕೃಷಿ ಬೆಳೆಗಳಿಗೆ ಹಾಗೂ ಕುಡಿಯುವ ನೀರಿಗಾಗಿ ಕೆರೆ, ಕಾಲುವೆ, ಬಾವಿ ಮುಖಾಂತರ ನೀರಾವರಿಯನ್ನು ಒದಗಿಸಿರುವ ನಿದರ್ಶನಗಳು ಶಾಸನಗಳಲ್ಲಿ ಉಲ್ಲೇಖಿತವಾಗಿವೆ.ಕೆರೆ ನೀರಾವರಿಯಲ್ಲಿ ಕರ್ನಾಟಕದಲ್ಲಿಯೇ ಹಾಸನ ಜಿಲ್ಲೆಯು 2ನೇ ಸ್ಥಾನವನ್ನು ಪಡದುಕೊಂಡಿದೆ.ಹಾಸನ ಜಿಲ್ಲೆಯಲ್ಲಿ ಒಟ್ಟು 6666 ಕೆರೆಗಳು ಇದ್ದು ಇದರಲ್ಲಿ ಕ್ರಮವಾಗಿ ಬೇಲೂರು, ಹಾಸನ, ಆಲೂರು, ಅರಕಲಗೂಡು, ಸಕಲೇಶಪುರ, ಹೊಳೇನರಸೀಪುರ, ಚೆನ್ನರಾಯಪಟ್ಟಣ, ಅರಸೀಕೆರೆ ಕೆರೆಗಳನ್ನು ಹೊಂದಿದೆ. ಇದರಲ್ಲಿ ಬೇಲೂರು ಅತಿ ಹೆಚ್ಚು ಕೆರೆಗಳನ್ನು ಹೊಂದಿದ್ದರೆ ಅರಸೀಕೆರೆ ಅತಿ ಕಡಿಮೆ ಕೆರೆಗಳನ್ನು ಹೊಂದಿದೆ. ಕೆರೆಗಳ ನೀರಾವರಿ ವಿಸ್ತೀರ್ಣವನ್ನು ಗಮನಿಸಿದಾಗ ಕ್ರಮವಾಗಿ ಅರಕಲಗೂಡು, ಹಾಸನ, ಆಲೂರು, ಬೇಲೂರು, ಸಕಲೇಶಪುರ,

ಚೆನ್ನರಾಯಪಟ್ಟಣ, ಅರಸೀಕೆರೆ ಹೊಂದಿದೆ. ಅರಕಲಗೂಡು ಅತಿ ಹೆಚ್ಚು ನೀರಾವರಿ ವಿಸ್ತೀರ್ಣವನ್ನು ಹೊಂದಿದ್ದರೆ ಅರಸೀಕೆರೆ ಅತಿ ಕಡಿಮೆ ನೀರಾವರಿ ಪ್ರದೇಶವನ್ನು ಹೊಂದಿದೆ.

ಹಾಸನ ಜಿಲ್ಲೆಯ ಒಟ್ಟು 8 ತಾಲ್ಲೂಕುಗಳಿಂದ 520 ಕಿ.ಮೀ ಉದ್ದದ ಕಾಲುವೆಯನ್ನು ಹೊಂದಿದ್ದು ಇದರಲ್ಲಿ ಕ್ರಮವಾಗಿ ಹೊಳೇನರಸೀಪುರ 205 ಕಿ.ಮೀ, ಅರಕಲಗೂಡು 96ಕಿ.ಮೀ, ಚೆನ್ನರಾಯಪಟ್ಟಣ 46 ಕಿ.ಮೀ, ಹಾಸನ 41 ಕಿ ಮೀ, ಆಲೂರು 40 ಕಿ.ಮೀ ಉದ್ದದ ಕಾಲುವೆಯನ್ನು ಹೊಂದಿದೆ. ಅರಸೀಕೆರೆ ಮತ್ತು ಸಕಲೇಶಪುರ ಯಾವುದೇ ಕಾಲುವೆ ನೀರಾವರಿಯನ್ನು ಹೊಂದಿರುವುದಿಲ್ಲ. ಕಾಲುವೆ ನೀರಾವರಿಯು 50,439 ಹೆಕ್ಟೇರ್ ಪ್ರದೇಶಗಳ ನೀರಾವರಿ ವಿಸ್ತೀರ್ಣವನ್ನು ಹೊಂದಿದೆ. ಇದರಲ್ಲಿ ಕ್ರಮವಾಗಿ ಚೆನ್ನರಾಯಪಟ್ಟಣ 25980 ಹೆಕ್ಟೇರ್, ಅರಕಲಗೂಡು 9513 ಹೆಕ್ಟೇರ್, ಹಾಸನ 6315 ಹೆಕ್ಟೇರ್, ಬೇಲೂರು 4465 ಹೆಕ್ಟೇರ್, ಆಲೂರು 2110 ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ಅರಸೀಕೆರೆ ಮತ್ತು ಸಕಲೇಶಪುರ ತಾಲ್ಲೂಕುಗಳು ಕಾಲುವೆ ನೀರಾವರಿಯಿಂದ ಹೊರತಾಗಿವೆ.

ಬಾವಿ ನೀರಾವರಿಯಲ್ಲಿ ಕೊಳವೆ ಬಾವಿ ಮತ್ತು ತೆರೆದ ಬಾವಿ ಎಂಬ 2 ವಿಧಗಳಿವೆ. ಕೊಳವೆ ಬಾವಿ ಸಂಖ್ಯೆಯಲ್ಲಿ ಅರಸೀಕೆರೆ 14508, ಚೆನ್ನರಾಯಪಟ್ಟಣ 13824, ಹಾಸನ 7387, ಅರಕಲಗೂಡು 3851, ಬೇಲೂರು 3560, ಆಲೂರು 1907, ಹೊಳೇನರಸೀಪುರ 2613, ಸಕಲೇಶಪುರ 216 ಕೊಳವೆ ಬಾವಿಗಳನ್ನು ಹೊಂದಿದೆ. ನೀರಾವರಿ ವಿಸ್ತೀರ್ಣದಲ್ಲಿ ಅರಸೀಕೆರೆ 27442 ಹೆಕ್ಟೇರ್‌ಗಳಿಗೆ, ಹಾಸನ 14877 ಹೆಕ್ಟೇರ್, ಚೆನ್ನರಾಯಪಟ್ಟಣ 6631 ಹೆಕ್ಟೇರ್, ಅರಕಲಗೂಡು 6210 ಹೆಕ್ಟೇರ್, ಬೇಲೂರು 4180 ಹೆಕ್ಟೇರ್, ಹೊಳೇನರಸೀಪುರ 1271 ಹೆಕ್ಟೇರ್, ಸಕಲೇಶಪುರ 354 ಹೆಕ್ಟೇರ್ ಭೂಮಿಗೆ ನೀರಾವರಿಯನ್ನು ಒದಗಿಸಿದೆ. ಅತಿ ಹೆಚ್ಚು ಕೊಳವೆ ಬಾವಿ ಸಂಖ್ಯೆ ಮತ್ತು ನೀರಾವರಿ ವಿಸ್ತೀರ್ಣದಲ್ಲಿ ಅರಸೀಕೆರೆ ಮೊದಲ ಸ್ಥಾನದಲ್ಲಿದ್ದು ಸಕಲೇಶಪುರ ಕೊನೆಯ ಸ್ಥಾನದಲ್ಲಿದೆ. ತೆರೆದ ಬಾವಿ ಮತ್ತು ನೀರಾವರಿ ವಿಸ್ತೀರ್ಣದಲ್ಲಿ ಕೊನೆಯ ಸ್ಥಾನವನ್ನು ಹೊಂದಿದೆ. ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಕೊಳವೆ ಬಾವಿ ಸಂಖ್ಯೆ ಮತ್ತು ನೀರಾವರಿ ವಿಸ್ತೀರ್ಣದಲ್ಲಿ ಮೊದಲ ಸ್ಥಾನದಲ್ಲಿದ್ದು ನಂತರದ ಸ್ಥಾನವನ್ನು ಕಾಲುವೆ ನೀರಾವರಿ ಮತ್ತು ಕೆರೆ ನೀರಾವರಿ ಹೊಂದಿರುವುದನ್ನು ಗಮನಿಸಬಹುದು.

**ಕೊಷ್ಟಕ 3, ಹಾಸನ ಜಿಲ್ಲೆಯಲ್ಲಿ ಹರಿಯುವ ನದಿಗಳ ಅಧ್ಯಯನವನ್ನು ತೋರಿಸುವ ಕೋಷ್ಟಕ**

| ಕ್ರ.ಸಂ | ನದಿಗಳು | ಹುಟ್ಟುವಿಕೆ | ಹಾಸನ ಜಿಲ್ಲೆಯ ಪ್ರವೇಶ ಸ್ಥಳ | ಹರಿಯುವಿಕೆ | ನಿರ್ಗಮನದ ಸ್ಥಳ |
|---|---|---|---|---|---|
| 1 | ಕಾವೇರಿ | ತಲಕಾವೇರಿ ( ಕೊಡಗು) | ಕೊಡವಿನಹೊಸಹಳ್ಳಿ | 15 ಮೈಲಿ | ಕೇರಳಾಪುರ (ಮೈಸೂರು) |
| 2 | ಹೇಮಾವತಿ | ಜಾವಳಿ ( ಚಿಕ್ಕಮಗಳೂರು) | ಆಚನಹಳ್ಳಿ | 113 ಮೈಲಿ | ನಗರತ್ತಿ (ಮಂಡ್ಯ) |
| 3 | ಯಗಚಿ | ಬಾಬಬುಡನ್‌ಗಿರಿ (ಚಿಕ್ಕಮಗಳೂರು) | ಸಿರಘಟ್ಟ | 41 ಮೈಲಿ | ಹೇಮಾವತಿ |
| 4 | ವಾಟೇಹೊಳೆ | ನಾಗೇನಹಳ್ಳಿ ( ಬೇಲೂರು) | | 61 ಮೈಲಿ | ಹೇಮಾವತಿ |

| | | | | | |
|---|---|---|---|---|---|
| 5 | ಕೆಂಪುಹೊಳೆ | ಪಶ್ಚಿಮ ಘಟ್ಟ | | | ನೇತ್ರಾವತಿ |
| 6 | ಎತ್ತಿನಹೊಳೆ | ಪಶ್ಚಿಮ ಘಟ್ಟ | | | ನೇತ್ರಾವತಿ |
| 7 | ಗಂಧದಹೊಳೆ | ಪಶ್ಚಿಮ ಘಟ್ಟ | | | ನೇತ್ರಾವತಿ |

**ಮೂಲಗಳು : ನೀರಾವರಿ ಅಧಿಕಾರಿಗಳಿಂದ ಮಾಹಿತಿ ಸಂಗ್ರಹ**

ಹಾಸನ ಜಿಲ್ಲೆ ಅರೆಮಲೆನಾಡು ಪ್ರದೇಶವಾಗಿರುವುದರಿಂದ ಹಾಗೂ ಯಥೇಚ್ಚವಾಗಿ ಮಳೆಯನ್ನು ಪಡೆಯುತ್ತಿರುವುದರಿಂದ ಪ್ರಮುಖವಾಗಿ 7 ನದಿಗಳು ಹರಿಯುತ್ತವೆ. ಇವುಗಳಲ್ಲಿ ಪ್ರಮುಖವಾಗಿ ಕಾವೇರಿ, ಹೇಮಾವತಿ, ಯಗಚಿ, ವಾಟೆಹೊಳೆ ನದಿಗಳು ಪೂರ್ವಾಭಿಮುಖವಾಗಿ ಹರಿಯುವುದರಿಂದ ಬಹಳಷ್ಟು ಕೃಷಿ ಭೂಮಿಗೆ ನೀರಾವರಿಯನ್ನು ಒದಗಿಸಿದೆ. ಆದರೆ ಕೆಂಪುಹೊಳೆ, ಎತ್ತಿನಹೊಳೆ, ಗಂಧದ ಹೊಳೆ ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀಸಮುದ್ರವನ್ನು ಸೇರುವುದರಿಂದ ಕೃಷಿ ಬಳಕೆಗೆ ಅತ್ಯಲ್ಪವಾಗಿದೆ. ಇತ್ತೀಚೆಗೆ ಕೋಲಾರಕ್ಕೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ಎತ್ತಿನ ಯೋಜನೆಯನ್ನು ಕೈಗೊಳ್ಳಲಾಗಿದೆ. ಕಾವೇರಿ ನದಿಯು ಕೊಡಗಿನ ತಲಕಾವೇರಿಯಲ್ಲಿ ಹುಟ್ಟಿ ಕೊಡವಿನ ಹೊಸಹಳ್ಳಿ ಮುಖಾಂತರ ಹಾಸನ ಜಿಲ್ಲೆಯನ್ನು ಪ್ರವೇಶಿಸಿ ರಾಮನಾಥಪುರ ಮತ್ತು ಕೊಣನೂರು ಹೋಬಳಿಗಳಲ್ಲಿ ಸುಮಾರು 15 ಮೈಲಿ ಉದ್ದ ಹರಿದು ನಂತರ ಕೇರಳಾಪುರದ ಮುಖಾಂತರ ಹಾಸನ ಜಿಲ್ಲೆಯಿಂದ ನಿರ್ಗಮಿಸುತ್ತದೆ. ಹೇಮಾವತಿಯು ಹಾಸನ ಜಿಲ್ಲೆಯ ಜೀವನದಿಯಾಗಿದ್ದು ಇದು ಚಿಕ್ಕಮಗಳೂರಿನ ಜಾವಳಿಯಲ್ಲಿ ಹುಟ್ಟಿ ಆಚನಹಳ್ಳಿ ಮುಖಾಂತರ ಹಾಸನ ಜಿಲ್ಲೆಯನ್ನು ಪ್ರವೇಶಿಸಿ ಸುಮಾರು 113 ಮೈಲಿ ದೂರ ಹರಿದು ನಗರತ್ತಿ ಮುಖಾಂತರ ಹಾಸನ ಜಿಲ್ಲೆಯಿಂದ ನಿರ್ಗಮಿಸುತ್ತದೆ. ಯಗಚಿ ನದಿಯು ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿಯಲ್ಲಿ ಹುಟ್ಟಿ ಶಿರಘಟ್ಟ ಮುಖಾಂತರ ಹಾಸನವನ್ನು ಪ್ರವೇಶಿಸಿ 41 ಮೈಲಿ ಹರಿದು ಗೊರೂರು ಬಳಿ ಹೇಮಾವತಿಯೊಂದಿಗೆ ಸಂಗಮವಾಗುತ್ತದೆ. ವಾಟೆಹೊಳೆ ನದಿಯು ಬೇಲೂರಿನ ನಾಗೇನಹಳ್ಳಿಯಲ್ಲಿ ಹುಟ್ಟಿ ಹಾಸನದಲ್ಲಿ 61 ಮೈಲಿಯಲ್ಲಿ ಹರಿದು ಹೇಮಾವತಿಯೊಂದಿಗೆ ಸಂಗಮವಾಗುತ್ತದೆ. ಕೆಂಪುಹೊಳೆ, ಎತ್ತಿನಹೊಳೆ ಪಶ್ಚಿಮ ಘಟ್ಟದಲ್ಲಿ ಹುಟ್ಟಿ ನೇತ್ರಾವತಿ ನದಿಯ ಮುಖಾಂತರ ಅರಬ್ಬೀಸಮುದ್ರವನ್ನು ಸೇರುತ್ತದೆ.

ಕೊಷ್ಟಕ 4, **ಹಾಸನ ಜಿಲ್ಲೆಯಲ್ಲಿರುವ ನೀರಾವರಿ ಜಲಾಶಯಗಳ ಅಧ್ಯಯನವನ್ನು ತೋರಿಸುವ ಕೋಷ್ಠಕ**

| ಕ್ರ.ಸಂ | ಅಣೆಕಟ್ಟಿನ/ ಜಲಾಶಯ ಹೆಸರು | ನಿರ್ಮಾಣದ ಸ್ಥಳ | ಸಂಗ್ರಹ ಸಾಮರ್ಥ್ಯ (ಟಿಎಂಸಿ) | ಉದ್ದ (ಮೀ) | ಪ್ರಾರಂಭ | ಮುಕ್ತಾಯ | ವೆಚ್ಚ (ಕೋಟಿ) | ಉದ್ದೇಶ | ನೀರಾವರಿ ಪ್ರದೇಶದ ವಿಸ್ತೀರ್ಣ(ಎಕರೆ) |
|---|---|---|---|---|---|---|---|---|---|
| 1 | ಹೇಮಾವತಿ | ಗೊರೂರು | 32.731 | 4692 | 1968 | 1980 | 56.37 | ನೀರಾವರಿ | 655000 |
| 2 | ಯಗಚಿ | ಚಿಕ್ಕಬ್ಯಾಡಗೆರೆ | 3.164 | 1180 | 1984 | | 35.38 | ನೀರಾವರಿ | 53006 |
| 3 | ವಾಟೆಹೊಳೆ | ಲಕ್ಕೆನಹಳ್ಳಿ | 1.366 | 1075 | 1976 | 2008 | 21.14 | ನೀರಾವರಿ | 18500 |

ಮೂಲಗಳು: ಒ ಅಂಡ್ ಎಂ ಮ್ಯಾನ್ಯುಯಲ್ ಗೊರೂರು ಡ್ಯಾಂ ಪುಟ ಸಂಖ್ಯೆ 8 ರಿಂದ 17 ಮತ್ತು ಒ ಅಂಡ್ ಎಂ ಮ್ಯಾನ್ಯುಯಲ್ ವಾಟೆಹೊಳೆ ಡ್ಯಾಂ ಪುಟ ಸಂಖ್ಯೆ 6 ರಿಂದ 11 ಮತ್ತು ಯಗಚಿ ನೀರಾವರಿ ಯೋಜನೆಯ ಪಕ್ಷಿನೋಟ.

ಹಾಸನ ಜಿಲ್ಲೆಯಲ್ಲಿ 7 ನದಿಗಳು ಹರಿಯುತ್ತಿದ್ದರೂ ಕೂಡ 3 ನದಿಗಳಿಗೆ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಅವುಗಳೆಂದರೆ ಕಾವೇರಿಯ ಉಪನದಿಗಳಾದ ಹೇಮಾವತಿ, ಯಗಚಿ, ವಾಟೆಹೊಳೆ ಪ್ರಮುಖವಾದ ಜಲಾಶಯಗಳು. ಇತ್ತೀಚೆಗೆ ಎತ್ತಿನಹೊಳೆಗೆ ಅಣೆಕಟ್ಟನ್ನು ನಿರ್ಮಿಸಿ ಕೋಲಾರಕ್ಕೆ ನೀರನ್ನು ಒದಗಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಹೇಮಾವತಿ ಜಲಾಶಯ ಅಣೆಕಟ್ಟನ್ನು ಹಾಸನ ಜಿಲ್ಲೆಯ ಗೊರೂರು ಬಳಿ ನೀರಾವರಿ ಉದ್ದೇಶಕ್ಕಾಗಿ ನಿರ್ಮಿಸಲಾಗಿದೆ. ಈ ಅಣೆಕಟ್ಟಿನ ನೀರಿನ ಸಂಗ್ರಹ ಸಾಮರ್ಥ್ಯವು 32.731 ಟಿಎಂಸಿ ಹೊಂದಿದೆ. ಇದರ ಉದ್ದ 4692 ಮೀಟರ್ ಆಗಿದ್ದು 1968 ರಲ್ಲಿ ಅಂದಿನ ಕರ್ನಾಟಕ ಮುಖ್ಯಮಂತ್ರಿಯಾದ ಶ್ರೀ ವೀರೇಂದ್ರ ಪಾಟೀಲ್ ರವರು ಗುದ್ದಲಿಪೂಜೆಯನ್ನು ನೆರವೇರಿಸಿದರು. ಈ ಅಣೆಕಟ್ಟು ನಿರ್ಮಾಣಕ್ಕೆ ಸುಮಾರು 56.37 ಕೋಟಿ ಖರ್ಚಾಗಿದ್ದು 1980ರ ವೇಳೆಗೆ ಕಾಮಗಾರಿ ಪೂರ್ಣಗೊಂಡಿತು. ಈ ನೀರಾವರಿ ಯೋಜನೆಯಿಂದ ಹಾಸನ, ತುಮಕೂರು, ಮಂಡ್ಯ, ಮೈಸೂರು ಜಿಲ್ಲೆಯ ಸುಮಾರು 6,55,000 ಎಕರೆಗಳಿಗೆ ನೀರಾವರಿಯನ್ನು ಒದಗಿಸಲಾಗಿದೆ. ಯಗಚಿ ಜಲಾಶಯ ಯೋಜನೆಯನ್ನು ಬೇಲೂರು ತಾಲ್ಲೂಕಿನ ಚಿಕ್ಕಬ್ಯಾಡಗೆರೆ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಅಣೆಕಟ್ಟಿನ ನೀರಿನ ಸಂಗ್ರಹಣ ಸಾಮರ್ಥ್ಯ 3.164 ಟಿಎಂಸಿ ಆಗಿದ್ದು ಇದರ ಉದ್ದ 1480 ಮೀಟರ್ ಆಗಿರುತ್ತದೆ. ಈ ಯೋಜನೆಯನ್ನು 1984 ರಲ್ಲಿ ಸುಮಾರು 35.38 ಕೋಟಿಗಳ ವೆಚ್ಚದಲ್ಲಿ ನೀರಾವರಿ ಉದ್ದೇಶಕ್ಕಾಗಿ ಕೈಗೆತ್ತಿಕೊಳ್ಳಲಾಯಿತು. ಇದರ ಅಚ್ಚುಕಟ್ಟು ಪ್ರದೇಶ 53,006 ಎಕರೆ ಆಗಿರುತ್ತದೆ. ಹಾಸನದ ಮತ್ತೊಂದು ಪ್ರಮುಖ ಜಲಾಶಯವೆಂದರೆ ವಾಟೆ ಹೊಳೆ ಜಲಾಶಯವಾಗಿದ್ದು ಲಕ್ಕೇನಹಳ್ಳಿ ಗ್ರಾಮದಲ್ಲಿ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಈ ಅಣೆಕಟ್ಟನ್ನು 1979 ರಲ್ಲಿ ಪ್ರಾರಂಭಿಸಿ ಸುಮಾರು 2008 ರಲ್ಲಿ ಮುಕ್ತಾಯಗೊಂಡಿರುತ್ತದೆ. ಇದರ ನೀರಿನ ಸಂಗ್ರಹಣ ಸಾಮರ್ಥ್ಯ 1.36 ಟಿಎಂಸಿ ಆಗಿದ್ದು ಸುಮಾರು 18500 ಎಕರೆಗಳಿಗೆ ನೀರಾವರಿಯನ್ನು ಒದಗಿಸಲಾಗಿದೆ.

**ಕೊಷ್ಟಕ 5, ನೀರಾವರಿ ಯೋಜನೆಗಳ ಕಾಲುವೆಗಳ ಅಧ್ಯಯನವನ್ನು ತೋರಿಸುವ ಕೋಷ್ಟಕ**

| ಕ್ರ.ಸಂ | ಜಲಾಶಯದ ಹೆಸರು | ಕಾಲುವೆಗಳು | ಉದ್ದ (ಕಿ.ಮೀ) | ಅಚ್ಚುಕಟ್ಟು ಪ್ರದೇಶ (ಎಕರೆ) |
|---|---|---|---|---|
| 1 | ಹೇಮಾವತಿ ಜಲಾಶಯ ಯೋಜನೆ | ಎಡದಂಡೆ ಕಾಲುವೆ/(0–73 ಎ.ಜಿ ರಾಮಚಂದ್ರರಾವ್ ಕಾಲುವೆ, 73–141 ಕಿ.ಮೀ ಸಾಹುಕಾರ್ ಚನ್ನಯ್ಯ ಕಾಲುವೆ) | 214 | 1,95,000 |
| | | ಬಲದಂಡೆ ಕಾಲುವೆ/ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕಾಲುವೆ | 91 | 20,000 |

| | | | | |
|---|---|---|---|---|
| | | ಬಲದಂಡೆ ಹೈ ಲೆವೆಲ್ ಕಾಲುವೆ/ ಬೋರಣ್ಣಗೌಡ ಕಾಲುವೆ | 106 | 56,000 |
| | ಬ್ರಾಂಚ್ ಕಾಲುವೆಗಳು | ತುಮಕೂರು ಬ್ರಾಂಚ್ ಕಾಲುವೆಗಳು/ ಟಿ ಮರಿಯಪ್ಪ ಕಾಲುವೆ | 240 | 1,47,000 |
| | | ನಾಗಮಂಗಲ ಬ್ರಾಂಚ್ ಕಾಲುವೆಗಳು/ ಸುಬ್ರಮಣ್ಯ ಕಾಲುವೆ | 71 | 2,37,000 |
| | ಸುರಂಗಗಳು | ಬಾಗೂರು ನವಿಲೆ ಸುರಂಗ ಕಾಲುವೆ | 9.762 | – |
| | | ಹೇಮಾವತಿ ಬಲದಂಡೆ ಸುರಂಗ ಕಾಲುವೆ | 3.721 | – |
| 2 | ಯಗಚಿ ಜಲಾಶಯ ಯೋಜನೆ | ಎಡದಂಡೆ ಕಾಲುವೆ | 100 | 29085 |
| | | ಕಾಮಸಮುದ್ರ ಉಪನಾಲೆ | 114 | 21573 |
| | | ಮೊಸಳೆ ಉಪನಾಲೆ | 15 | 2348 |
| 3 | ವಾಟೇಹೊಳೆ ಜಲಾಶಯ | ಬಲದಂಡೆ ಕಾಲುವೆ | 38 | 10,582 |
| | | ಎಡದಂಡೆ ಕಾಲುವೆ | 10 | 500 |
| | | ನಾಕಲಗೂಡ್ ಬ್ರಾಂಚ್ ಕಾಲುವೆ | 15 | – |

ಮೂಲಗಳು: ಒ ಅಂಡ್ ಎಂ ಮ್ಯಾನ್ಯುಯಲ್ ಗೊರೂರು ಡ್ಯಾಂ ಪುಟ ಸಂಖ್ಯೆ 8 ರಿಂದ 17 ಮತ್ತು ಒ ಅಂಡ್ ಎಂ ಮ್ಯಾನ್ಯುಯಲ್ ವಾಟೇಹೊಳೆ ಡ್ಯಾಂ ಪುಟ ಸಂಖ್ಯೆ 6 ರಿಂದ 11 ಮತ್ತು ಯಗಚಿ ನೀರಾವರಿ ಯೋಜನೆಯ ಪಕ್ಷಿನೋಟ.

ಕಾವೇರಿ ಉಪನದಿಗಳಾದ ಹೇಮಾವತಿ, ಯಗಚಿ, ವಾಟೆಹೊಳೆ ಜಲಾಶಯಕ್ಕೆ ಹಾಸನ ಜಿಲ್ಲೆಯಲ್ಲಿ ನೀರಾವರಿ ಉದ್ದೇಶಕ್ಕಾಗಿ 3 ಅಣೆಕಟ್ಟುಗಳನ್ನು ನಿರ್ಮಿಸಿ ಕಾಲುವೆಗಳ ಮುಖಾಂತರ ವಿವಿಧ ಪ್ರದೇಶಗಳಿಗೆ ಹಾಗೂ ನೆರೆಯ ಜಿಲ್ಲೆಗಳಿಗೆ ಕುಡಿಯುವ ನೀರು, ಕೃಷಿ, ಕೈಗಾರಿಕೆಗಳು ಮೊದಲಾದ ಉದ್ದೇಶಗಳಿಗಾಗಿ ನೀರನ್ನು ಒದಗಿಸಲಾಗುತ್ತಿದೆ. ಹೇಮಾವತಿ ಜಲಾಶಯ ಕಾಲುವೆಗಳಲ್ಲಿ 3 ಪ್ರಮುಖ ಕಾಲುವೆಗಳು, 2 ಬ್ರಾಂಚ್ ಕಾಲುವೆಗಳು, 2 ಸುರಂಗಗಳನ್ನು ಗಮನಿಸಬಹುದು. ಇದರಲ್ಲಿ ಎಡದಂಡೆ ಕಾಲುವೆ 241 ಕಿ ಮೀ ಉದ್ದವಿದ್ದು, ಪ್ರಾರಂಭದಿಂದ 73 ಕಿ ಮೀ ವರೆಗೆ ಎ.ಜಿ.ರಾಮಚಂದ್ರ ಕಾಲುವೆ ಎಂದು 74 ರಿಂದ 241 ಕಿ ಮೀ ರವರೆಗೆ ಸಾಹುಕಾರ್ ಚೆನ್ನಯ್ಯ ಕಾಲುವೆ ಎಂದು ಕರೆಯಲಾಗುತ್ತದೆ. ಇದರ ಅಚ್ಚುಕಟ್ಟು ಪ್ರದೇಶ 1,95,000 ಎಕರೆ ಆಗಿದೆ. ಬಲದಂಡೆ ಕಾಲುವೆಯು 91 ಕಿ ಮೀ ಉದ್ದವಿದ್ದು ಇದನ್ನು ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕಾಲುವೆ ಎಂದು ಕರೆಯುತ್ತಾರೆ.

ಈ ಕಾಲುವೆಯು 20,000 ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ಬಲದಂಡೆ ಹೈ ಲೆವೆಲ್ ಕಾಲುವೆಯನ್ನು ಸ್ವತಂತ್ರ ಹೋರಾಟಗಾರ ಬೋರಣ್ಣಗೌಡ ಕಾಲುವೆ ಎಂದು ಕರೆಯುತ್ತಾರೆ. ಇದು 106 ಕಿ ಮೀ ಉದ್ದವಿದ್ದು 56,000 ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ತುಮಕೂರು ಬ್ರಾಂಚ್ ಕಾಲುವೆಯನ್ನು ಟಿ ಮರಿಯಪ್ಪ ಕಾಲುವೆ ಎಂದು ಕರೆಯಲಾಗುತ್ತಿದ್ದು ಇದರ ಉದ್ದ 240 ಕಿ ಮೀ ಇದ್ದು 1,47,000 ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ನಾಗಮಂಗಲ ಬ್ರಾಂಚ್ ಕಾಲುವೆಯನ್ನು ಸುಬ್ರಮಣ್ಯ ಕಾಲುವೆ ಎಂದು ಕರೆಯಲಾಗುತ್ತಿದ್ದು ಸುಮಾರು 71 ಕಿ ಮೀ ಉದ್ದವಿದ್ದು 2,67,000 ಅಚ್ಚುಕಟ್ಟು ಪ್ರದೇಶವನ್ನು

ಹೊಂದಿದೆ. ಇದಲ್ಲದೆ ಸುಮಾರು 9.762 ಕಿ ಮೀ ಉದ್ದದ ಬಾಗೂರು ನವಿಲೆ ಸುರಂಗ ಕಾಲುವೆ ಮತ್ತು 3.721 ಕಿ ಮೀ ಉದ್ದದ ಹೇಮಾವತಿ ಬಲದಂಡ ಸುರಂಗ ಕಾಲುವೆಯನ್ನು ಹೊಂದಿದೆ. ಯಗಚಿ ಜಲಾಶಯವು ಒಂದು ಕಾಲುವೆ ಮತ್ತು ಎರಡು ಉಪಕಾಲುವೆಗಳನ್ನು ಹೊಂದಿದೆ. ಎಡದಂಡೆ ನಾಲೆಯು ಸುಮಾರು 100 ಕಿ ಮೀ ಉದ್ದವಿದ್ದು 25,085 ಎಕರೆ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ಕಾಮುಸಮುದ್ರ ಉಪನಾಲೆಯು 114 ಕಿ ಮೀ ಇದ್ದು 21,573 ಎಕರೆ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ಮೊಸಳೆ ಉಪನಾಲೆಯು 15 ಕಿ ಮೀ ಇದ್ದು 2348 ಎಕರೆ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ವಾಟೆಹೊಳೆ ಜಲಾಶಯದ ಬಲದಂಡೆ ಕಾಲುವೆಯು 38 ಕಿ ಮೀ ಉದ್ದವಿದ್ದು 10,582 ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ. ಎಡದಂಡೆ ಕಾಲುವೆಯು 10 ಕಿ ಮೀ ಉದ್ದವಿದ್ದು 500 ಎಕರೆ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ.

**ಕೊಷ್ಟಕ 6,** ನೀರಾವರಿ ಯೋಜನೆಗಳಿಂದ ಲಾಭ ಪಡೆಯುತ್ತಿರುವ ಜಿಲ್ಲೆಗಳ ಅಧ್ಯಯನವನ್ನು ತೋರಿಸುವ ಕೋಷ್ಟಕ

| ಕ್ರ.ಸಂ | ಜಲಾಶಯಗಳು | ಹಾಸನ (ಎಕರೆಗಳಲ್ಲಿ) | ತುಮಕೂರು(ಎಕರೆಗಳಲ್ಲಿ) | ಮಂಡ್ಯ(ಎಕರೆಗಳಲ್ಲಿ) | ಮೈಸೂರು(ಎಕರೆಗಳಲ್ಲಿ) |
|---|---|---|---|---|---|
| 1 | ಹೇಮಾವತಿ ಜಲಾಶಯ | 1,07,480+45,756 =1,53,236 | 3,14,000 | 2,27,920 | 5,600 |
| 2 | ಯಗಚಿ ಜಲಾಶಯ | 53,006 | – | – | – |
| 3 | ವಾಟೇಹೊಳೆ ಜಲಾಶಯ | 18500 | – | – | – |

ಮೂಲಗಳು: ಒ ಅಂಡ್ ಎಂ ಮ್ಯಾನ್ಯುಯಲ್ ಗೊರೂರು ಡ್ಯಾಂ ಪುಟ ಸಂಖ್ಯೆ 8 ರಿಂದ 17 ಮತ್ತು ಒ ಅಂಡ್ ಎಂ ಮ್ಯಾನ್ಯುಯಲ್ ವಾಟೇಹೊಳೆ ಡ್ಯಾಂ ಪುಟ ಸಂಖ್ಯೆ 6 ರಿಂದ 11 ಮತ್ತು ಯಗಚಿ ನೀರಾವರಿ ಯೋಜನೆಯ ಪಕ್ಷಿನೋಟ.

ಹಾಸನ ಜಿಲ್ಲೆಯಲ್ಲಿ 3 ಪ್ರಮುಖ ಅಣೆಕಟ್ಟುಗಳು ನಿರ್ಮಾಣ ಆಗಿದ್ದು ಇದರಿಂದ ಹಾಸನ ಜಿಲ್ಲೆ ಮಾತ್ರವಲ್ಲದೆ ನೆರೆಯ ಜಿಲ್ಲೆಗಳಾದ ತುಮಕೂರು, ಮಂಡ್ಯ, ಮೈಸೂರು ಜಿಲ್ಲೆಗಳು ಹೆಚ್ಚಿನ ಪ್ರಯೋಜನವನ್ನು ಪಡೆಯುತ್ತವೆ. ಯಗಚಿ ಮತ್ತು ವಾಟೆಹೊಳೆ ಜಲಾಶಯದ ನೀರನ್ನು ಸಂಪೂರ್ಣವಾಗಿ ಹಾಸನ ಜಿಲ್ಲೆಯ ಆಲೂರು, ಬೇಲೂರು, ಹಾಸನ ತಾಲ್ಲೂಕುಗಳ ಬೆಳೆಗಳಿಗೆ ಮತ್ತು ಕುಡಿಯುವ ನೀರಿಗೆ ಬಳಕೆಯಾಗುತ್ತದೆ. ಹೆಚ್ಚುವರಿ ನೀರು ಹೇಮಾವತಿ ಅಣೆಕಟ್ಟನ್ನು ಸೇರುತ್ತದೆ. ಹೇಮಾವತಿ ಜಲಾಶಯದ ನೀರನ್ನು 4 ಜಿಲ್ಲೆಗಳು ಬಳಸಿಕೊಳ್ಳುತ್ತಿದ್ದು ಇವುಗಳಲ್ಲಿ ತುಮಕೂರು ಜಿಲ್ಲೆ 3,14,000 ಎಕರೆ ಅಚ್ಚುಕಟ್ಟು ಪ್ರದೇಶವನ್ನು ಹೊಂದಿ ಮೊದಲ ಸ್ಥಾನವನ್ನು ಹೊಂದಿದ್ದು, ನಂತರದ ಸ್ಥಾನವನ್ನು ಮಂಡ್ಯ ಜಿಲ್ಲೆ 2,27,920 ಎಕರೆ ಅಚ್ಚುಕಟ್ಟು ಪ್ರದೇಶವನ್ನು ಹೊಂದಿ 2ನೇ ಸ್ಥಾನವನ್ನು ಪಡೆದಿದೆ. ಹಾಸನ ಜಿಲ್ಲೆಯು

1,53,236 ಅಚ್ಚುಕಟ್ಟು ಪ್ರದೇಶವನ್ನು ಹೊಂದಿ 3 ನೇ ಸ್ಥಾನವನ್ನು ಪಡೆದಿದೆ. ಮೈಸೂರು ಜಿಲ್ಲೆ 5,600 ಎಕರೆ ಅಚ್ಚುಕಟ್ಟು ಪ್ರದೇಶವನ್ನು ಹೊಂದಿ ಕೊನೆಯ ಸ್ಥಾನವನ್ನು ಪಡೆದಿದೆ. ಸದರಿ ಅಣೆಕಟ್ಟು ಹಾಸನ ಜಿಲ್ಲೆಯಲ್ಲಿದ್ದರೂ ಕೂಡ ಹೆಚ್ಚಿನ ಲಾಭವನ್ನು ತುಮಕೂರು ಮತ್ತು ಮಂಡ್ಯ ಜಿಲ್ಲೆಗಳು ಪಡೆಯುತ್ತಿವೆ.

**ಸಂಶೋಧನೆಯಲ್ಲಿ ಕಂಡುಕೊಂಡ ಅಂಶಗಳು**

- ಹಾಸನ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಮಳೆಯ ಅಸಮಾನ ಹಂಚಿಕೆಯನ್ನು ಕಾಣಬಹುದು, ಸಕಲೇಶಪುರದಲ್ಲಿ ಅತಿಹೆಚ್ಚು ಪಳೆ ಪ್ರದೇಶವಾದರೆ, ಬೇಲೂರು, ಹಾಸನ. ಆಲೂರು, ಅರಕಲಗೂಡುಗಳು ಸಹಾ ಉತ್ತಮ ಮಳೆಯನ್ನು ಪಡೆಯುತ್ತದೆ. ಅರಸೀಕೆರೆ, ಚನ್ನರಾಯಪಟ್ಟಣ, ಹೊಳೆನರಸೀಪುರ ಕಡಿಮೆ ಮಳೆ ಪಡೆಯುವ ತಾಲ್ಲೂಕುಗಳಾಗಿವೆ.
- ಹಾಸನ ಜಿಲ್ಲೆಯಲ್ಲಿ ಕೆರೆ ಮತ್ತು ಕಾಲುವೆ ನೀರಾವರಿಗಿಂತ ಕೊಳವೆಬಾವಿ ನೀರಾವರಿ ಅಧಿಕವಾಗಿದೆ.
- ಹಾಸನ ಜಿಲ್ಲೆಯಲ್ಲಿ 7 ನದಿಗಳು ಹರಿಯುತ್ತಿದ್ದರು, ಮೂರು ನದಿಗಳ ನೀರನ್ನು ಮಾತ್ರ ಸದ್ಬಳಕೆಯಾಗುತ್ತಿದೆ.
- ಅಣೆಕಟ್ಟಗಳ ನಿರ್ಮಾಣದಿಂದ ಸಾವಿರಾರು ಎಕರೆ ಭೂಮಿ ಮುಳುಗಡೆಯಾಗಿ ಸಾವಿರಾರು ಕುಟುಂಬಗಳು ನಿರಾಶ್ರಿತರಾದರು.
- ಹೇಮಾವತಿ ಜಲಾಶಯ ಯೋಜನೆಯಿಂದ ನೆರೆಯ ಜಿಲ್ಲೆಗಳು ಹೆಚ್ಚು ಲಾಭವನ್ನು ಪಡೆದುಕೊಳ್ಳುತ್ತಿವೆ ಮತ್ತು ಅವರ ಜೀವನಮಟ್ಟ ಸುಧಾರಿಸಿದೆ
- ಹಾಸನ ಜಿಲ್ಲೆಯ ಜಲಾಶಯ ಯೋಜನೆಗಳಿಂದ ಕೃಷಿಭೂಮಿಗೆ ಅಧಿಕ ಬೆಲೆ, ಉತ್ಪಾದನೆಯಲ್ಲಿ ಹೆಚ್ಚಳದಿಂದಾಗಿ ಇದರ ಪ್ರಯೋಜನ ಪಡೆಯುತ್ತಿರುವ ಜನರ ಆರ್ಥಿಕ ಮಟ್ಟ ಸುಧಾರಿಸಿದೆ.

**ಸಲಹೆಗಳು**

- ಮಳೆ ಪ್ರಮಾಣದಲ್ಲಿ ಅಸಮಾನ ಹಂಚಿಕೆಯನ್ನು ಹೊಂದಿರುವ ತಾಲ್ಲೂಕುಗಳಿಗೆ ಕಾಲುವೆ ಮತ್ತು ಕೆರೆ ನೀರಾವರಿ ಮುಖಾಂತರ ನೀರನ್ನು ಒದಗಿಸಬೇಕು.
- ಕೊಳವೆಬಾವಿ ವೆಚ್ಚದಾಯಕ ಹಾಗೂ ಇದರಿಂದ ಅಂತರ್ಜಲಮಟ್ಟ ಕುಸಿಯುತ್ತಿರುವುದರಿಂದ, ಕೆರೆ ಮತ್ತು ಕಾಲುವೆ ನೀರಾವರಿಗೆ ಹೆಚ್ಚು ಆಧ್ಯತೆಯನ್ನು ನೀಡಬೇಕು.
- ಎತ್ತಿನಹೊಳೆ ಮತ್ತು ಕೆಂಪುಹೊಳೆ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು.
- ಅಣೆಕಟ್ಟು ನಿರ್ಮಾಣದಿಮದ ನಿರಾಶ್ರಿತರಾದವರಿಗೆ ಪುನರ್ವಸತಿಯನ್ನು ಕಲ್ಪಿಸಿ, ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.

- ❖ ಹಾಸನ ಜಿಲ್ಲೆಯ ಜನರು ಅಧಿಕವಾಗಿ ಸದರಿ ಜಲಾಶಯ ಯೋಜನೆಗಳಿಂದ ಲಾಭ ಪಡೆಯುವಂತೆ ಯೋಜನೆಯನ್ನು ರೂಪಿಸಬೇಕು.

**ಉಪಸಂಹಾರ :** ಆಧುನಿಕ ಜಗತ್ತಿನಲ್ಲಿ ನೀರಿನ ಪ್ರತಿ ಹನಿಯನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವುದು ಪ್ರತಿಯೊಬ್ಬ ನಾಗರೀಕನ ಆದ್ಯ ಕರ್ತವ್ಯ ಆಗಿದೆ. ನೈಸರ್ಗಿಕವಾಗಿ ಮಳೆಯ ರೂಪದಲ್ಲಿ ಸಿಗುವ ಪ್ರತಿ ಹನಿ ನೀರನ್ನು ಸಂಗ್ರಹಿಸುವುದಕ್ಕಾಗಿ, ಅತಿವೃಷ್ಟಿಯ ಸಂದರ್ಭದಲ್ಲಿ ಪ್ರವಾಹವನ್ನು ತಡೆಗಟ್ಟುವುದಕ್ಕಾಗಿ, ಅನಾವೃಷ್ಟಿಯಲ್ಲಿ ಸಂಗ್ರಹಿಸಿರುವ ನೀರನ್ನು ವ್ಯವಸ್ಥಿತವಾಗಿ ಬಳಕೆ ಮಾಡಿಕೊಂಡು ಜೊತೆಗೆ ಅಂತರ್ಜಲ ಮಟ್ಟವನ್ನು ಕಾಯ್ದುಕೊಳ್ಳವುದಕ್ಕಾಗಿ ಅಣೆಕಟ್ಟುಗಳ ನಿರ್ಮಾಣ ಅತ್ಯಾವಶ್ಯಕವಾಗಿದೆ. ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ, ನೀರು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿ ಆಗಿರುವುದರಿಂದ ಪ್ರತಿಯೊಂದು ನೀರಿನ ಹನಿಯು ವ್ಯರ್ಥವಾಗದಂತೆ ಸದ್ಬಳಕೆ ಮಾಡಿಕೊಳ್ಳುವುದಕ್ಕಾಗಿ ಯೋಜನೆಗಳನ್ನು ರೂಪಿಸಬೇಕಾಗಿರುತ್ತದೆ.

## ಆಕರ ಗ್ರಂಥಗಳು

1) ಹಾಸನ ಜಿಲ್ಲೆಯ ಅಂಕಿಅಂಶಗಳ ನೋಟ 2022–23 ಪುಟ ಸಂಖ್ಯೆ 75 ಮತ್ತು 76

2) ಮೈಸೂರು ಗೆಜಟಿಯರ್ ಹಾಸನ ಜಿಲ್ಲೆ 1971.

3) ಒ ಅಂಡ್ ಎಂ ಮ್ಯಾನ್ಯುಯಲ್ ಗೊರೂರು ಡ್ಯಾಂ ಪುಟ ಸಂಖ್ಯೆ 8 ರಿಂದ 17 ಮತ್ತು ಒ ಅಂಡ್ ಎಂ ಮ್ಯಾನ್ಯುಯಲ್ ವಾಟೇಹೊಳೆ ಡ್ಯಾಂ ಪುಟ ಸಂಖ್ಯೆ 6 ರಿಂದ 11 ಮತ್ತು ಯಗಚಿ ನೀರಾವರಿ ಯೋಜನೆಯ ಪಕ್ಷಿನೋಟ.

4) ಮೂಲಗಳು: ಒ ಅಂಡ್ ಎಂ ಮ್ಯಾನ್ಯುಯಲ್ ಗೊರೂರು ಡ್ಯಾಂ ಪುಟ ಸಂಖ್ಯೆ 8 ರಿಂದ 17 ಮತ್ತು ಒ ಅಂಡ್ ಎಂ ಮ್ಯಾನ್ಯುಯಲ್ ವಾಟೇಹೊಳೆ ಡ್ಯಾಂ ಪುಟ ಸಂಖ್ಯೆ 6 ರಿಂದ 11 ಮತ್ತು ಯಗಚಿ ನೀರಾವರಿ ಯೋಜನೆಯ ಪಕ್ಷಿನೋಟ.

5) ಡಾ.ರಂಗನಾಥ, ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ.2012, ಶ್ರೀ ಶಿವಕುಮಾರ್ ಏಜೆನ್ಸಿ, ಗದಗ್, ಪುಟ ಸಂಖ್ಯೆ–26,54

6) ಡಾ.ರಂಗನಾಥ, ಭಾರತದ ಪ್ರಾದೇಶಿಕ ಮತ್ತು ಆರ್ಥಿಕ ಭೂಗೋಳಶಾಸ್ತ್ರ.2006, ಶ್ರೀ ಶಿವಕುಮಾರ್ ಏಜೆನ್ಸಿ, ಗದಗ್, ಪುಟ ಸಂಖ್ಯೆ 106

6) Shivaprasad B.M, Assessing the different sources of irrigation in Hassan district. International Journal of Advanced Research in Management and Social Sciences, pg no 2-5.

7) Shivaprasad B.M, july 2014,Accessibility of hemavathi Irrigation Project,A study of Hassan District of Karnataka.TheInternational Journal Of Humanities & Social Studies,pg no1-7

8) The UN World Water Development Report 2003.